ಮೈಸೂರ ಗೆಜಿಟ್ಟು.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮೇ ತಾ॥ 13, ಸ್ಯ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 7ನೇ ಏಪ್ರೆಲ್ 1876.

ಮೈಸೂರು ಧೊರೆಗಳ ಶೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಪ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್	ಅಪ್ಪೀಲ್ವಾದಿಗಳು ಮತ್ತು ಅರ್ಜ್ಜೀದಾರರ ಹೆಸರು		ಪ್ರತಿವಾದಿಗಳ ಹೆಸರು		ಹಿಯರಿಂಗ್ ತಾರೀಖು.
ಸ್ಪೆ. ಅ. ೯	ಶೇಷಭಟ್ಟ್ಯಾ	..	ಕೃಷ್ಣಪ್ಪ ವಗೈರೇ	..	೧ನೇ ಜೂನ್
ಸ್ಪೆ. ಅ. ೧೯	ಹಲಿಗೇ ಗೌಡ	..	ತಿಂಮ್ಮೇಗವುಡ	..	ಡಿಟೋ
ಸ್ಪೆ. ಅ. ೨೦	ಬಸವಾ	..	ಹ್ಯಾವನ ಬಸವಾ	..	ಡಿಟೋ
ಫ್ರೂಪ್ ಸ್ಪೆ. ಅ. ೨೧	ವೀರಪ್ಪಾ	..	ರುದ್ರಂಣಾ	..	೩ನೇ ಡಿಟೋ
ಕೊ. ಸ್ಪೆ. ಅ. ೪	ವೆಂಕಟೇಶೈಯ	..	ಮೈದಿನಿ ವಗೈರೆ	..	ಡಿಟೋ
ಸ್ಪೆ. ಅ. ೨೦	ಚಿಕ್ಕ ಜನ್ನಪ್ಪ	..	ಬಸಪ್ಪ ವೆಗೈರೆ	..	೬ನೇ ಡಿಟೋ

J. D. GORDON,
Judl. Commr.

ಪೊಲೀಸ್ ಇಲಾಖಾ.

ತಾರೀಖು 5ನೇ ಮೇ 1876.

ಚಿತ್ರದುರ್ಗ ಡಿಸ್ಟ್ರಿಕ್ಟ್ ಥರ್ಡ್ ಕ್ಲಾಸ್ ಇನ್‌ಸ್ಪೆಕ್ಟರ್ ವೀರಾಸಾಮಿನಾಯಕರಿಗೆ ಮೊಹೇ ಮಜಕೂರು 2ನೇ ಮರ್ತ್ತಂ ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 9ನೇ ಮೇ 1876.

ಸ್ಯ 1876ನೇ ಏಪ್ರೆಲ್ 29ನೇ ಮರ್ತ್ತಂ ಮೈಸೂರು ಗೆಜಟ್ 227ನೇ ಪುಟದಲ್ಲಿ ಪಾಯಿಷ್ ಮಾಡಲ್ಪಟ್ಟ ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಇಲಾಖಾ ಭಡತಿಗಳಲ್ಲಿ ಸಂಭವಿಸಿದ ಈ ಕೆಳಗ ನಮೂದಿಸಲ್ಪಡುವ ತಪ್ಪು ತಿದ್ದಲ್ಪಟ್ಟಿರುತ್ತೆ.

4ನೇ ಕ್ಲಾಸ್ ಇನ್‌ಸ್ಪೆಕ್ಟರ್ ಗ್ರೇಡಿನಿಂದ 3ನೇ ಕ್ಲಾಸ್ ಇನ್‌ಸ್ಪೆಕ್ಟರ್ ಗ್ರೇಡಿಗೆ ಭಡತಿ ಮಾಡಲ್ಪಟ್ಟ ಕೆಸರಿಂಗ್ ವ ಸ್ವಾಮಿರಾವ್ ಯೆಂಬದಕ್ಕೆ ಬದಲಾಗಿ ಸಬ್ ಇನ್‌ಸ್ಪೆಕ್ಟರ್‌ಗಳಾದ ಕೆಸರಿಂಗ್ ಸ್ವಾಮಿರಾವ್ ಯವರುಗಳು 4ನೇ ಕ್ಲಾಸ್ ಇನ್‌ಸ್ಪೆಕ್ಟರ್ ದರ್ಜೆಗೆ ಭಡತಿಮಾಡಲ್ಪಟ್ಟಿರುತ್ತಾರೆ.

"ಬಮೋಜೀಬ್ ಹುಕ್ಕುಂ,"

E. D. GOMPERTZ,
Dy. Inspr. Genl. of Police.

ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ನಂ. 653. ತಾರೀಖು 29ನೇ ಏಪ್ರಿಲ್ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆಪ್ಟ್ ಕಾಸ್ ಮೇಕರ್ ಸಾಹೆಬರು, 1876ನೇ ಇಸವಿ ಮಾರ್ಚಿ 4ನೇ ತಾರೀಖುಮೈಸೂರು ಗೆಜೆಟ್ 1ನೇ ಭಾಗ 45ನೇ ಪುಟದಲ್ಲಿ ಫಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮಾಹೆ 3ನೇ ಮರ್ಕುಂ 382ನೇ ನಂಬರ್ ಚೀವ್ ಕಮ್ಮಿಷನರ್ ಸಾಹೆಬರವರ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾ 1876ನೇ ಇಸವಿ ಮಾರ್ಚಿ 2ನೇ ಮರ್ಕುಂ ಮಧ್ಯಾನ್ಹಕ್ಕೆ ಪೂರ್ವ ಉಪಯೋಗಿಸಿಕ್ಕೊಂಡರು.

W. C. ANDERSON,
Survey and Settlement Commr. of Mysore.

ಫಿನಾರ್ಷಿಯಲ್ ಇಲಾಖಾ.

ಹರ್‌ಮೇಜಸ್ಟಿ ಸೀಮೆಯ ಕೋರ್ಟುಗಳಿಂದ ಮೈಸೂರು ಸೀಮೆಯಲ್ಲಿ ಪ್ರೊಸೆಸ್ ಸಾದರಾತೀ ಬಗ್ಯೆ ಬರುವ ಮತ್ತು ಹರ್‌ಮೇಜಸ್ಟೀ ಸೀಮೆಗಳಲ್ಲಿ ಪ್ರೊಸೆಸ್ ಸಾದರಾತಿ ಕೋರ್ಟ್‌ಗಳ ಬರುವ ಮೊಬಲಗ ವಿಷಯ.

ಸರ್ಕ್ಯುಲರ್ ನಂ. 1277—ತಾರೀಖು 10ನೇ ಮೇ 1876.

ಡಿವಿಜನ್ ಡಿಸ್ಟ್ರಿಕ್ಟು ವ ಇತರ ಕೋರ್ಟುಗಳ ಇನ್ ಚಾರ್ಜ್ ಆಫಿಸರುಗಳಿಗೆ ಮತ್ತು ಡಿಸ್ಟ್ರಿಕ್ಟು ಟ್ರೆಜರಿ ಆಫೀಸರ್‌ಗಳಿಗೆ ಅಮಲ್ದಾರುಗಳಿಗೆ ಸಹಾ.

ಮೈಸೂರು ಸೀಮೆಯಲ್ಲಿ ಪ್ರೊಸೆಸ್ ಸಾದರಾತಿ ಬಗ್ಯೆ ಹರ್‌ಮೇಜಸ್ಟಿ ಸೀಮೆಯ ಕೋರ್ಟುಗಳಿಂದ ಬಂದ ಮೊಬಲಗನ್ನು ಲೋಕಲ್ ಟ್ರೆಜರಿಗಳಿಗೆ ಜಮೆ ಕಟ್ಟಲ್ಪಡತಕ್ಕ ಬಗ್ಯೆ ಮೈಸೂರು ಸೀಮೆಯ ಕೆಲವು ಕೋರ್ಟುಗಳು ರವಾನಿಸುವದನ್ನು ತಿಳಿದು ಡೆಪ್ಯುಟಿ ಅಕೌಂಟೆಂಟ್ ಜನರಲ್‌ಯವರು ತಿಳಿಸುವದೇನಂದರೆ ಹಾಂಗೆ ಬಂದ ಮೊಬಲಗನ್ನು ಪ್ರೊಸೆಸ್ ಕಾಗದಗಳಿಗೆ ಅಂಟಿಸಬೇಕಾದ ಕೋರ್ಟು ಫೀಸ್ ಲೇಬಲ್‌ಗಳನ್ನು ಕೊಂಡುಕ್ಕೊಳ್ಳತಕ್ಕ ಬಗ್ಯೆ ವಿನಿಯೋಗಿಸತಕ್ಕದ್ದು ಲೇಬಲ್‌ಗಳನ್ನು ಬಿಕರಿ ಮಾಡುವ ವೆಂಡರ್ ಹಣವನ್ನು ಖಜಾನೆಗೆ ಕೋರ್ಟು ಫೀಸ್ ಸ್ಟ್ಯಾಂಪುಗಳ ಹುಟ್ಟುವಳಿಯಂಬದಾಗಿ, ವಾಡಿಕೆಯಾದ ಕಾಲದಲ್ಲಿ ಪಾವತಿಮಾಡತಕ್ಕದ್ದು.

ಹರ್‌ಮೇಜಸ್ಟಿ ಸೀಮೆಯ ವೊಂದು ಕೋರ್ಟು ಮೂಲಕ ವೊಂದು ಸಮ್ಮ ಸಾದರಾಗತಕ್ಕ ಬಗ್ಯೆ ವೊಂದು ಮೈಸೂರು ಕೋರ್ಟಿನಲ್ಲಿ ಮೊಬಲಗ ತೆಗದುಕ್ಕೊಂಡರೆ ಆ ಮೊಬಲಗ 1872ನೇ ಇಸವಿ ಅಕ್ಟೋಬರ್ ಮಾಹೆ ಜುಡಿಷಿಯಲ್ ಕಮ್ಮಿಷನ್ನರ್ ಸರ್ಕುಲರ್ ಹುಕ್ಕುಂ ಅನುಸಾರವಾಗಿ ಮೈಸೂರು ಕೋರ್ಟಿನಿಂದ ಹರಮೇಜಸ್ಟಿ ಸೀಮೆಯ ಕೋರ್ಟಿಗೆ ರವಾನಿಸಲ್ಪಡತಕ್ಕದ್ದಾಗಿರುತ್ತೆ.

H. HUDSON,
Dy. Acct. General in Mysore.

ಪಬ್ಲಿಕ್ ವರಕ್ಸ್ ಇಲಾಖಾ.

ತಾರೀಖು 5ನೇ ಮೇ 1876.

ಮೈಸೂರು ಗೆಜಟ್ 209ನೇ ಪೇಜಿನಲ್ಲಿ ಫಾಯಿಷ್ ಮಾಡಲ್ಪಟ್ಟ 1876ನೇ ಇಸವಿ ಯೇಪ್ರಿಲ್ 6ನೇ ಮರ್ಕುಂ ಇಸ್ತಿಹಾರ್ ಪ್ರಕಾರ ಕಾವೇರೀ ಡಿವಿಜನ್ ಯಗ್ಜಿಕ್ಯೂಟೀವ್ ಇಂಜನಿಯರ್ ಆಫಿಸ್ 2ನೇ ಕ್ಲರ್ಕ್ ಥೊರಸಾಮಿಪಿಳ್ಳೆಯವರಿಗೆ ಕೊಡಲ್ಪಟ್ಟ ಪ್ರಿವಿಲಿಜ್ ರಜಾ 1876ನೇ ಇಸವಿ ಏಪ್ರಿಲ್ 30ನೇ ಮರ್ಕುಂ ವರಿಗೂ ವಿಸ್ತರಿಸಲ್ಪಟ್ಟಿರುತ್ತೆ.

G. J. PERRAM,
Exec. Engr., Cauvery Division.